ಕರ್ನಾಟಕ ಸರಕಾರ

# ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ ಯಾದಗಿರಿ.

ಸಂಖ್ಯೆ:ಇ2(2)ಆಡಳಿತ/ಸಪ್ರಾ.ಶಾ.ಶಿ./ಪ್ರೌ.ಶಿ.ಬಡ್ತಿ:/01/2025-26 ದಿನಾಂಕ: 17-04-2025.

## " ಅಧಿಕೃತ ಜ್ಞಾಪನ "

**ವಿಷಯ:-** ದಿನಾಂಕ: 01.01.2025 ರಲ್ಲಿದ್ದಂತೆ ಪ್ರಾಥಮಿಕ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:-1) ಕರ್ನಾಟಕ ಸರಕಾರಿ ನೌಕರರ(ಜೇಷ್ಠತಾ)ನಿಯಮಗಳು-1957
ಸರಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ-2017.

2) ಸರ್ಕಾರದ ಅಧಿಸಚನೆ ಸಂಖ್ಯೆ ಇಪಿ/121/ಎಲ್.ಬಿ.ಪಿ/2021ಬೆಂಗಳೂರು ದಿನಾಂಕ 27-03-2025
3) ಸರ್ಕಾರದ ಅಧಿಸಚನೆ ಸಂಖ್ಯೆ ಇಡಿ/291/ಎಲ್.ಬಿ.ಪಿ/2015ಬೆಂಗಳೂರು ದಿನಾಂಕ 29-09-2016
4) ಸರ್ಕಾರಿ ಆದೇಶ ಸಂಖ್ಯೆ ಇಡಿ.25. ಎಲ್.ಬಿ.ಪಿ 2017 ದಿನಾಂಕ 18-04-2017
5) ಸರ್ಕಾರಿ ಆದೇಶ ಸಂಖ್ಯೆ ಆಇ 13 ಎಸ್.ಆರ್.ಪಿ 2014 ದಿನಾಂಕ 05-09-2014
6) ಸರ್ಕಾರದ ಅಧಿಸಚನೆ ಸಂಖ್ಯೆ ಡಿಪಿಎಆರ್ಇ 69 ಎಸ್.ಆರ್.ಇ 2002 ಬೆಂಗಳೂರು ದಿನಾಂಕ 24-06-2003
7) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 10-12-2021
8) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ, ಸಿ ಆಸುಇ 178 ಸೇನೆನಿ 2021 ದಿನಾಂಕ 06-11-2021
9) ಸರ್ಕಾರದ ಅಧಿಸಚನೆ ಸಂಖ್ಯೆ ಸಿಆಸುಇ 266 ಸೇನೆನಿ 2022 ಬೆಂಗಳೂರು ದಿನಾಂಕ 28-11-2023
10) ಮಾನ್ಯ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ರವರ ಪತ್ರ ಸಂಖ್ಯೆ ಸಿ3(1)ಪ್ರಾಶಾಶಿಶಿ:ಪ್ರಾಶಾಬಡ್ತಿ:1:2025-26 ದಿನಾಂಕ 08-04-2025
11) ಮಾನ್ಯ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ರವರ ಸುತ್ತೋಲೆ ಸಂಖ್ಯೆ ಸಿ1(1)ಆಡಳಿತ/ಖಾಲಿ/ಹು.ಭ/25/2020-21 ದಿನಾಂಕ 29-09-2020
12) ಮಾನ್ಯ ಸಹನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ರವರ ಪತ್ರ ಸಂಖ್ಯೆ ಸಿ1(1)ಆಡಳಿತ/ಖಾಲಿ/ಹು.ಭ/25/2020-21 ದಿನಾಂಕ 14-12-2020
13) ಈ ಕಛೇರಿ ಅಧಿಕೃತಜ್ಞಾಪನ ಪತ್ರ ಸಂಖ್ಯೆ:ಇ2(2)ಆಡಳಿತ:ಪ್ರಾ.ಪ್ರೌ.ಬಡ್ತಿ:/89/2020-21 ದಿನಾಂಕ05-12-2021
14) ಈ ಕಛೇರಿಯ ಜ್ಞಾಪನ ಪತ್ರ ಸಂಖ್ಯೆಇ2(2)ಆಡಳಿತ/ಪ್ರಾಪ್ರೌ.ಬಡ್ತಿ/58/2019-20 ದಿನಾಂಕ29-01-2020
15) ಪತ್ರಿಕಾ ಪ್ರಕಟಣೆ ದಿನಾಂಕ 01-02-2020
16) ಕ್ಷೇತ್ರ ಶಿಕ್ಷಣಾಧಿಕಾರಿಗಳು ಸುರಪೂರ, ಶಹಾಪೂರ ಹಾಗೂ ಯಾದಗಿರಿ ರವರಿಂದ ಪ್ರಸ್ತಾವನೆ ಸ್ವೀಕೃತ ಆಗಿರುವ ಕ್ರಮವಾರು ದಿನಾಂಕ 01-03-2020, 01-04-2020 ಹಾಗೂ 12-04-2020
17) ಕ್ಷೇತ್ರ ಶಿಕ್ಷಣಾಧಿಕಾರಿಗಳು ಸುರಪೂರ, ಶಹಾಪೂರ ಹಾಗೂ ಯಾದಗಿರಿ ರವರಿಂದ ಪ್ರಸ್ತಾವನೆ ಸ್ವೀಕೃತ ಆಗಿರುವ ಆಕ್ಷೇಪಣೆ ದಿನಾಂಕ 03-06-2021

~~~***~~~

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಎ, ಬಿ.ಎಸ್ಸಿ ಮತ್ತು ಬಿ.ಎಸ್/ಬಿ.ಪಿ.ಎಡ್ ತರಬೇತಿ ಹೊಂದಿದ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ)ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ 6-8) ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ಅರ್ಹತೆ ಹೊಂದಿದ ಶಿಕ್ಷಕರಿಗೆ ಮುಂಬಡ್ತಿ ನೀಡುವ ಕುರಿತು ಉಲ್ಲೇಖ(1)ಮತ್ತು(11)ರ ಆದೇಶದ ಆಧಾರಿತವಾಗಿ, ಅನುಚ್ಛೇದ 371(ಜೆ) ನಿಯಮದಂತೆ (ಮೂಲ ವೃಂದದ, ಸ್ಥಳೀಯ ವೃಂದ ಮತ್ತು ಉಳಿದ ಮೂಲ ವೃಂದದ ಒಳಗೊಂಡಂತೆ), ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) ರವರಿಗೆ ಈ ಹಿಂದೆ ನೀಡಲಾದ ಬಡ್ತಿ ಪ್ರಕ್ರಿಯೆಗಾಗಿ ಸ್ವೀಕೃತ ಆಗಿರುವ ಪ್ರಸ್ತಾವನೆಗಳನ್ನು ಪರಿಶೀಲನೆಗೆ ಒಳಪಡಿಸಲಾಗಿ ಖಾತ್ರಿಪಡಿಸಿಕೊಂಡ ನಂತರ ಅಂತಿಮಗೊಳಿಸಲಾಗಿರುವಂತೆ ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ 6-8) ರವರ ನೇಮಕಾತಿ ದಾಖಲೆಗಳನ್ನು ಪರಿಶೀಲಿಸಿ ಸದರಿ ಜೇಷ್ಠತಾ ಪಟ್ಟಿ ಸಿದ್ಧಪಡಿಸಲಾಗಿರುತ್ತದೆ.

ಮುಂದುವರೆದು ಉಲ್ಲೇಖ(10)ರ ಪ್ರಕಾರ ಶಿಕ್ಷಣ ಇಲಾಖೆಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ/ ಜಿ.ಪಿ.ಟಿ ಶಿಕ್ಷಕರಿಗೆ ಪ್ರೌಢ ಶಾಲಾ ಗ್ರೇಡ್-2 ಶಿಕ್ಷಕರಾಗಿ ಮುಂಬಡ್ತಿ ನೀಡುವ ಬಗ್ಗೆ ಉಲ್ಲೇಖ(2)ರ ವೃಂದ ಮತ್ತು ನೇಮಕಾತಿ ನಿಯಮಗಳ ನಿಯಮಾನುಸಾರ ಬಡ್ತಿ ನೀಡಲು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಲಾಗಿರುವಂತೆ ದಿನಾಂಕ 01-01-2025ರಲ್ಲಿದ್ದಂತೆ ಬಿ.ಎ, ಬಿ.ಎಸ್.ಸಿ ಮತ್ತು ಬಿ.ಇಡಿ/ಬಿ.ಪಿ.ಎಡ್ ತರಬೇತಿ ಹೊಂದಿದ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ)ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ 6-8) ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ತಯಾರಿಸಿದ

ಪುಟ-2ಕ್ಕೆ

Scanned with AnyScanner
~~~

ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು https://cpikalaburgi.karnataka.gov.in/page/SERVICES/TEACHERS./en ಇಲಾಖೆಯ ವೈಬ್ ಸೈಟದಲ್ಲಿ ಪ್ರಕಟಿಸಿದೆ, ಸದರಿ ಜೇಷ್ಠತಾ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರವಾನಿಸಲಾಗುತ್ತಿದ್ದು, ಸದರಿಯವರು ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಟಿಸುವ ಜೊತೆಗೆ ಸಂಬಂಧಿಸಿದ ಎಲ್ಲಾ ಶಿಕ್ಷಕರ ಗಮನಕ್ಕೆ ತರಲು ಅಗತ್ಯ ಕ್ರಮ ವಹಿಸುವುದು, ಜೇಷ್ಠತಾ ಪಟ್ಟಿಯನ್ನು ಸಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮಾಡಿ, ದಿನ ಪತ್ರಿಕೆಯಲ್ಲಿ, ಇತ್ಯಾಧಿ ಮಾಧ್ಯಮಗಳ ಮುಖಾಂತರ ವ್ಯಾಪಕ ಪ್ರಚಾರ ನಡೆಸಲು ಕ್ರಮ ವಹಿಸತಕ್ಕದ್ದು.

ಸದರಿ ಜೇಷ್ಠತಾ ಪಟ್ಟಿಗೆ ಆಕ್ಷೇಪಣೆಗಳನ್ನು ನಮೂನೆ (ಅನುಬಂಧ-2)ರಲ್ಲಿ ಮಾಹಿತಿ ಭರ್ತಿ ಮಾಡಿ ಸಮರ್ಥಿಸುವ ಪೂರಕ ದಾಖಲೆಗಳ ಸಮೇತ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ದಿನಾಂಕ 30-04-2025 ರೊಳಗಾಗಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಕಟಿಸಲಾಗುವ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಇರದೇ ಇರುವ ಶಿಕ್ಷಕರು/ಹೊಸದಾಗಿ ಸೇರ್ಪಡೆಯಾಗಬೇಕಾದ ಶಿಕ್ಷಕರು (ಅನುಬಂಧ-1ರ ನಮೂನೆ,) ಅದರ ಹಿಂಬಾಗದಲ್ಲಿ ನಮೂದಿಸಿರುವ ಕ್ರಮ ಸಂಖ್ಯೆ 1 ರಿಂದ 13ರ ವರೆಗಿನ ದಾಖಲೆಗಳಿಗೆ ಸ್ವಯಂ ದೃಢೀಕರಿಸಿ ದಿನಾಂಕ 30-04-2025 ರೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿ ಸ್ವೀಕೃತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಆಕ್ಷೇಪಣೆ ಸಲ್ಲಿಸುವ ಶಿಕ್ಷಕರು ನಿಗಧಿತ ಯಾವುದೇ ಪೂರಕ ದಾಖಲೆಗಳು ಇಲ್ಲದೇ ಮತ್ತು ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು/ಪ್ರಸ್ತಾವನೆಗಳನ್ನು ಪರಿಗಣಿಸುವುದಿಲ್ಲ, ಬಿ.ಇ.ಓ ಕಛೇರಿಯಲ್ಲಿ ಸ್ವೀಕೃತ ಆಗಿರುವ ಆಕ್ಷೇಪಣೆ/ಪ್ರಸ್ತಾವನೆ ಕ್ರೋಢಿಕರಿಸಿ ದಿನಾಂಕ 30-04-2025 ರಂದು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ತಪ್ಪಿದಲ್ಲಿ ಸಂಬಂಧಿಸಿದ ತಾಲ್ಲೂಕಿನಲ್ಲಿ ಯಾವುದೇ ಆಕ್ಷೇಪಣೆ/ಪ್ರಸ್ತಾವನೆ ಸ್ವೀಕೃತ ಆಗಿರುವುದಿಲ್ಲವೆಂದು ಪರಿಗಣಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ನಂತರ ಉಂಟಾಗುವ ಸಮಸ್ಯೆಗಳಿಗೆ ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಯವರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

ವಿಶೇಷ ಸೂಚನೆ: - **ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಾಣಿಸಿದ ಕ್ರಮಗಳನ್ನು ಆಧರಿಸಿ ತಯಾರಿಸಿ ಪ್ರಕಟಿಸಿದೆ.**

1) ಸರಕಾರಿ ಆದೇಶ ಸಂಖ್ಯೆ.ಇಡಿ.291.ಎಲ್.ಬಿ.ಪಿ.2015ಬೆಂಗಳೂರು ದಿನಾಂಕ: 29-09-2016 ಕರ್ನಾಟಕ ಸರಕಾರಿ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಟ್-1 ಹುದ್ದೆಯ ವೃಂದ ನಿಯಮಗಳ ನಿಗದಿತ ವಿದ್ಯಾರ್ಹತೆ ಪರಿಗಣಿಸಿ ತಯಾರಿಸಿದೆ.
2) https://www.ugc.ac.in ದಲ್ಲಿ ಪ್ರಕಟಿಸಿರುವ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ವಿಶ್ವವಿದ್ಯಾಲಯದಿಂದ ಪದವಿ/ಸ್ನಾತಕೋತ್ತರ ಪದವಿ ಹಾಗೂ ಬಿಪಿಇಡಿ ಪದವಿ ಪಡೆದ ದಾಖಲಾತಿಗಳನ್ನು ಆಧರಿಸಿ ತಯಾರಿಸಿದೆ.
3) ಜಿಲ್ಲೆಯಲ್ಲಿ ನೇಮಕಗೊಂಡಿರುವ ಶಿಕ್ಷಕರ ನೇಮಕಾತಿ ವರ್ಷ ಹಾಗೂ ಆಯ್ಕೆ ಪಟ್ಟಿಯಲ್ಲಿ ಮೆರಿಟ್ ಆಧಾರದ ಮೇಲೆ ತಯಾರಿಸಿದೆ. ಮೆರಿಟ್ ಪ್ರತಿ ಲಗತ್ತಿಸದೇ ಇರುವ ಶಿಕ್ಷಕರನ್ನು ಆಯಾ ನೇಮಕಾತಿ ವರ್ಷದಲ್ಲಿ ಮೆರಿಟ್ ಸಂಖ್ಯೆ ನಮೂದಿಸಿದ ನಂತರ ಕ್ರಮಾಂಕದಲ್ಲಿ ಸೇವೆಗೆ ಸೇರಿದ ದಿನಾಂಕದಿಂದ ಜೇಷ್ಠತೆಯನ್ನು ಪರಿಗಣಿಸಿದೆ.
4) ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಜೇಷ್ಠತೆ ಸಂಬಂಧಿಸಿದಂತೆ ಜಿಲ್ಲೆಯು ಒಂದು ಘಟಕವಾಗಿರುವುದರಿಂದ ಬೇರೆ ಜಿಲ್ಲೆಯಲ್ಲಿ ನೇಮಕ ಹೊಂದಿ ಈ ಜಿಲ್ಲೆಗೆ ವರ್ಗಾವಣೆಗೊಂಡು ಹಾಜರಾಗಿರುವ ದಿನಾಂಕದಿಂದ ಶಿಕ್ಷಕರ ಜೇಷ್ಠತೆ ಪರಿಗಣಿಸಿ ತಯಾರಿಸಿದೆ.
5) 2 ವರ್ಷ ಪರಿವೀಕ್ಷಣಾವಧಿ ಘೋಷಣೆ ಆಗಿರುವ ಷರತ್ತಿಗೆ ಒಳಪಟ್ಟಿದೆ.
6) ಶಿಕ್ಷಕರ ಮೇಲಿನ ದೂರುಗಳು/ಶಿಸ್ತು ಪ್ರಕರಣ/ಇಲಾಖೆ ವಿಚಾರಣೆ ಬಾಕಿ ಇಲ್ಲದಿರುವ ಬಗ್ಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢಿಕರಣ ಪತ್ರ ಸಲ್ಲಿಸುವ ಷರತ್ತಿಗೆ ಒಳಪಟ್ಟಿದೆ.
7) ಈ ಪಟ್ಟಿಯಲ್ಲಿರುವ ಶಿಕ್ಷಕರಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಲಯದ ಬಾಕಿ ಪ್ರಕರಣಗಳು ಇದ್ದಲ್ಲಿ ಸಂಪೂರ್ಣ ವಿವರಗಳ ವಿಸ್ತೃತವಾದ ವರದಿಯನ್ನು ಸಲ್ಲಿಸುವುದು.
8) ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳು ಕಂಡು ಬಂದಲ್ಲಿ ಸರಿಪಡಿಸುವ ಅಧಿಕಾರವನ್ನು ಈ ಕಛೇರಿಯು ಕಾಯ್ದಿರಿಸಿಕೊಂಡಿದೆ.
9) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಶಿಕ್ಷಕರ ಮಾಹಿತಿಗಾಗಿ ಪ್ರಕಟಿಸುವ ಜೊತೆಗೆ ಸಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮತ್ತು ದಿನ ಪತ್ರಿಕೆಯಲ್ಲಿ, ಇತ್ಯಾದಿ ಮೂಲಕ ವ್ಯಾಪಕ ಪ್ರಚಾರ ಮಾಡಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದೆ.
10) ಬಡ್ತಿ ನೀರಾಕರಿಸುವ ಶಿಕ್ಷಕರು ಮುಂಚೆಯೇ ಮುಚ್ಚಳಿಕೆ ಪತ್ರ ಸ್ವತಃ ಕೈ ಬರಹದಿಂದ ಬರೆದಿರುವ ಪತ್ರವನ್ನು ಈ ಕಛೇರಿಗೆ ಖುದ್ದಾಗಿ ಬಂದು ಜಿಲ್ಲಾ ನೋಡಲ್ ಅಧಿಕಾರಿಗಳಲ್ಲಿ ಸಲ್ಲಿಸಿ ಉಪನಿರ್ದೇಶಕರಿಂದ ಅಂಗಿಕರಿಸಿಕೊಳ್ಳುವುದು ಕಡ್ಡಾಯಗೊಳಿಸಲಾಗಿದೆ.

**ಕ್ಷೇ.ಶಿ ಅಧಿಕಾರಿಗಳಿಗೆ ಸೂಚನೆ :-** ಸದರಿ ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ವಿವರ, ವಿದ್ಯಾರ್ಹತೆ ಸರಿಯಿರುವುದನ್ನು ಪರಿಶೀಲಿಸಿ ಖಾತ್ರಪಡಿಸಿಕೊಳ್ಳುವ ಜೊತೆಗೆ ಹೆಸರು ನಮೂದು ಆಗಿರುವ ಶಿಕ್ಷಕರಲ್ಲಿ ನಿವೃತ್ತಿ, ಮರಣ ಹಾಗೂ ಬಡ್ತಿ, ಅಮಾನತ್ತು ಪ್ರಕರಣದಲ್ಲಿ/ ವರ್ಗಾವಣೆ ಆಗಿ ಬೇರೆ ಶಾಲೆಗೆ ಸ್ಥಳ ನಿಯುಕ್ತಿಗೊಳಿಸಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ಅಂತಹ ಶಿಕ್ಷಕರ ಮಾಹಿತಿ ಸಂಪೂರ್ಣ ವಿವರದೊಂದಿಗೆ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಮುಂದೆ ಉಂಟಾಗುವ ಸಮಸ್ಯೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿಯವರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಉಪನಿರ್ದೇಶಕರು(ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ಯಾದಗಿರಿ

ಗೆ,
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಶಹಾಪೂರ,ಸುರಪೂರ, ಯಾದಗಿರಿ

**ಪ್ರತಿಯನ್ನು:-**

1)ಮಾನ್ಯ ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2)ಮಾನ್ಯ ನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
3)ಶ್ರೀ ಬಸನಗೌಡ ಪ್ರಭಾರಿ ಶಿಕ್ಷಣಾಧಿಕಾರಿಗಳು, ಜಿಲ್ಲಾ ನೋಡಲ್ ಅಧಿಕಾರಿಗಳು ಈ ಕಛೇರಿ ರವರು ಸಂಬಂಧಿಸಿದ ಶಿಕ್ಷಕರುಗಳಿಗೆ ಮಾರ್ಗದರ್ಶನ ಮಾಡಲು ಅಗತ್ಯ ಕ್ರಮ ವಹಿಸುವುದು.
4)ಕಛೇರಿ ಪ್ರತಿ.

Scanned with AnyScanner

## ಅನುಬಂಧ–1

**01–01–2025 ರಲ್ಲಿದ್ದಂತೆ ಬಿ.ಎ /ಬಿ.ಎಸ್.ಸಿ ಹಾಗೂ ಬಿ.ಇಡಿ /ಬಿ.ಪಿ.ಇಡಿ ತರಬೇತಿ ಹೊಂದಿದ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ), ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ) ಮತ್ತು ದೈಹಿಕ ಶಿಕ್ಷಣ ಶಿಕ್ಷಕರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್–2, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್–1 ಹುದ್ದೆಗೆ ಬಡ್ತಿಗಾಗಿ ಸಿದ್ಧಪಡಿಸಲಾಗುವ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಸೇರಿಸಲು ಸಲ್ಲಿಸಬೇಕಾದ ಪ್ರಸ್ತಾವನೆ ನಮೂನೆ**

**ಬಡ್ತಿಗಾಗಿ ಪರಿಗಣಿಸಬೇಕಾದ ವಿಷಯ:–** ________________.

| | | | | |
|---|---|---|---|---|
| 1 | ಶಿಕ್ಷಕರ ಹೆಸರು | | | |
| | ಕೆ.ಜಿ.ಐ.ಡಿ ಸಂಖ್ಯೆ (ಇಇಡಿಎಸ್ ತಂತ್ರಾಂಶದಲ್ಲಿ ಇದ್ದಂತೆ) | | | |
| 2 | ಪದನಾಮ | | | |
| 2 | ಶಾಲೆಯ ಹೆಸರು ಮತ್ತು ವಿಳಾಸ, ಡೈಸ್ ಕೋಡ್ ನಮೂದಿಸುವುದು | | | |
| 3 | ಜನ್ಮ ದಿನಾಂಕ | | | |
| 4 | **ಸೇವೆಗೆ ಸೇರಿದ ದಿನಾಂಕ** (ಗ್ರಾಮೀಣ ಕೃಪಾಂಕದಡಿಯಲ್ಲಿ ಮರು ನೇಮಕಾತಿ ಹೊಂದಿದ್ದಲ್ಲಿ ಮರು ನೇಮಕಾತಿ ದಿನಾಂಕ ನಮೂದಿಸುವುದು) | | | |
| 5 | ಪ್ರಾಥಮಿಕ ಶಾಲಾ /ಜಿ.ಪಿ.ಟಿ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಮೆರಿಟ್ (ಆಯ್ಕೆ ಪಟ್ಟಿಯ ಝೆರಾಕ್ಸ್ ಪ್ರತಿ ಕಡ್ಡಾಯವಾಗಿ ಲಗತ್ತಿಸುವುದು) | | | |
| 6 | ಸೇವಾ ಸಕ್ರಮ ದಿನಾಂಕ | | | |
| 7 | ಬೇರೆ ಜಿಲ್ಲೆಯಿಂದ ವರ್ಗಾವಣೆಯಾಗಿ ಈ ಜಿಲ್ಲೆಗೆ ಬಂದಿದ್ದಲ್ಲಿ ಆ ಜಿಲ್ಲೆಯ ಹೆಸರು, ಈ ಜಿಲ್ಲೆಗೆ ಬಂದ ದಿನಾಂಕ | | | |
| 8 | ನೇಮಕಾತಿ ಪ್ರವರ್ಗ | | | |
| 9 | ಜಾತಿ ಮತ್ತು ಪ್ರವರ್ಗ | | | |
| 10 | .ವಿಕಲಚೇತನ ನೌಕರರಾಗಿದ್ದಲ್ಲಿ ಇತ್ತೀಚಿನ ಅಂಗವಿಕಲ ಪ್ರಮಾಣ ಪತ್ರದ ಪ್ರತಿ ಸಲ್ಲಿಸುವುದು | | | |
| 11 | ಮೂಲ ಸೇವಾ ಪುಸ್ತಕದಲ್ಲಿ ಸ್ವಗ್ರಾಮ ಘೋಷಣೆ ಮಾಡಿದ ಮಾಹಿತಿ, ಗ್ರಾಮ, ತಾಲ್ಲೂಕು & ಜಿಲ್ಲೆ (ಝೆರಾಕ್ಸ್ ಪ್ರತಿ ಲಗತ್ತಿಸುವುದು) | | | |
| 12 | ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಧ್ಯಮ | | | |
| 13 | ಬಿ.ಎ, ಬಿ.ಎಸ್.ಸಿ ಪದವಿ ಪಾಸಾದ ವರ್ಷ, ತಿಂಗಳು ವಿಶ್ವ ವಿದ್ಯಾಲಯದ ಹೆಸರು | | | |
| 14 | ಬಿ.ಇಡಿ/ ಬಿ.ಪಿ.ಇಡಿ, ರೆಗ್ಯುಲರ್ ಅಭ್ಯರ್ಥಿಯಾಗಿ ವ್ಯಾಸಂಗ ಮಾಡಿದಲ್ಲಿ ಇಲಾಖಾ ಅನುಮತಿ ಪಡೆದ ಪತ್ರ ಸಂಖ್ಯೆ& ದಿನಾಂಕ (ಪ್ರತಿ ಲಗತ್ತಿಸುವುದು) | | | |
| 15 | ಬಿ.ಎ/ ಬಿ.ಎಸ್.ಸಿ /ಬಿ.ಇಡಿ/ ಬಿ.ಪಿ.ಇಡಿ, ರೆಗ್ಯುಲರ್ ಅಭ್ಯರ್ಥಿಯಾಗಿ ವ್ಯಾಸಂಗ ಮಾಡಿದಲ್ಲಿ ಸೇವಾ ಪುಸ್ತಕದಲ್ಲಿ ವ್ಯಾಸಂಗ ಅವಧಿಯನ್ನು ವೇತನ ರಹಿತ ಅವಧಿಯೆಂದು ಪರಿಗಣಿಸಿ ನಮೂದಿಸಿದ ಪುಟ ಜೆರಾಕ್ಸ್ ಪ್ರತಿ ಬಿ.ಇ.ಓ ರವರ ದೃಢೀಕರಿಸಿದ ದಾಖಲೆ | | | |
| 16 | ಪದವಿಯಲ್ಲಿ ವ್ಯಾಸಂಗ ಮಾಡಿದ ಐಚ್ಛಿಕ ವಿಷಯಗಳು | 1. | 2. | 3. |
| 17 | ಬಿ.ಇಡಿ/ ಬಿಪಿಇಡಿ ನಲ್ಲಿ ಬೋಧನಾ ವಿಷಯಗಳು(ಮೆಥಡ್) | 1. | 2. | |
| 18 | ಶಿಕ್ಷಕರ ಮೊಬೈಲ್ ಸಂಖ್ಯೆ | | | |
| 19 | **ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಭಿಪ್ರಾಯ** | | | |

ಈ ಮೇಲಿನ ಶಿಕ್ಷಕರ ಮಾಹಿತಿಯನ್ನು ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ದಾಖಲೆ ಪರಿಶೀಲಿಸಿ ಸರಿಯಿದೆಯೆಂದು ದೃಢೀಕರಿಸಿದೆ.

ಅರ್ಜಿದಾರರ ಹೆಸರು & ರುಜು

**ಕ್ಷೇತ್ರ ಶಿಕ್ಷಣಾಧಿಕಾರಿಗಳ ರುಜು ಮತ್ತು ಮೊಹರು**

Scanned with AnyScanner

**ಶಿಕ್ಷಕರ ಜೇಷ್ಠತಾ ಪಟ್ಟಿಯಲ್ಲಿ ಹೆಸರು ಸೇರಿಸಲು ಸಲ್ಲಿಸಬೇಕಾದ ದಾಖಲೆಗಳ ವಿವರ**

1 .ಪ್ರಸ್ತಾವನೆ ನಮೂನೆ

2 .ನೇಮಕಾತಿ ಆದೇಶ ಪ್ರತಿ.

3. ನೇಮಕಾತಿ ಆದೇಶ ಪ್ರತಿಯಲ್ಲಿ ಆಯ್ಕೆ ಮೀಸಲಾತಿಯನ್ನು ಸ್ಪಷ್ಟವಾಗಿ ಕಾಣುತ್ತಿರುವದನ್ನು ಖಾಚಿತಪಡಿಸಿಕೊಳ್ಳುವುದು.

4. ಪರಿವೀಕ್ಷಣಾ ಅವಧಿ ಘೋಷಣೆಯಾದ ಜ್ಞಾಪನ ಪತ್ರದ ಪ್ರತಿ.

5. ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ.

6 .ಪಿ.ಯು.ಸಿ ದ್ವಿತೀಯ ವರ್ಷದ ಅಂಕಪಟ್ಟಿ ಪ್ರತಿ.

7. ಪದವಿ ವಿದ್ಯಾರ್ಹತೆ ದೃಢೀಕೃತ ಪ್ರತಿಗಳು ಪಾಸಿಂಗ್ ಪ್ರಮಾಣ ಪತ್ರ ಪ್ರತಿಯೊಂದಿಗೆ.

8. ಬಿ.ಪಿ.ಇಡ್ ವಿದ್ಯಾರ್ಹತೆ ದೃಢೀಕೃತ ಪ್ರತಿಗಳು ಪಾಸಿಂಗ್ ಪ್ರಮಾಣ ಪತ್ರ ಪ್ರತಿಯೊಂದಿಗೆ.

9. ಬಿ.ಎ ಅಥವಾ ಬಿಪಿಇಡಿ ರೆಗ್ಯುಲರ್ ಅಭ್ಯರ್ಥಿಯಾಗಿ ವ್ಯಾಸಂಗ ಮಾಡಿದ್ದಲ್ಲಿ ಇಲಾಖೆಯಿಂದ ನೀಡಿದ ಅನುಮತಿ ಪತ್ರ ಹಾಗೂ ಸೇವಾ ಪುಸ್ತಕದಲ್ಲಿ ವೇತನ ರಹಿತ ಅವಧಿಯೆಂದು ಪರಿಗಣಿಸುವ ಬಗ್ಗೆ ನಮೂದಿಸಿರುವ ಪುಟ ಜೀರಾಕ್ಸ್ ಪ್ರತಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸತಕ್ಕದ್ದು.

10. ಪರಿಶಿಷ್ಟ ಜಾತಿ/ ಪರಿಶೀಷ್ಟ ಪಂಗಡದ ಅಭ್ಯರ್ಥಿಯಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಪ್ರತಿ.

11.ವಿಕಲಚೇತನ ನೌಕರರಾಗಿದ್ದಲ್ಲಿ ಇತ್ತೀಚಿನ ಅಂಗವಿಕಲ ಪ್ರಮಾಣ ಪತ್ರದ ಪ್ರತಿ ಸಲ್ಲಿಸುವುದು.

12.ಸಂಬಂಧಿಸಿದ ಶಿಕ್ಷಕರ ಸೇವಾ ಪುಸ್ತಕ ಪುಟ ಭಾಗ-1 (ಹೆಸರು ಮತ್ತು ಸ್ವಗ್ರಾಮ /ಖಾಯಂ ವಿಳಾಸ ನಮೂದಿಸಿರುವ ಪುಟ)ಬಿ.ಇ.ಓ ರವರು ದೃಢೀಕರಿಸಿ ಸಲ್ಲಿಸುವುದು.

(ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ಅಭ್ಯರ್ಥಿಗಳಿಗೆ ಮಾನ್ಯ ಸರಕಾರದ ಪತ್ರ ಸಂಖ್ಯೆ ಡಿಪಿಆರ್ 33 ಹೆಚ್‌ಕೆಪಿ2013 ದಿನಾಂಕ 29-01-2014 ರ ಪ್ರಕಾರ ಸರಕಾರಿ ನೌಕರರನ್ನು ಮೂಲ ವೃಂದ ಹಾಗೂ ಮಿಕ್ಕುಳಿದ ವೃಂದ ಎಂದು ವರ್ಗೀಕರಣ 371ಜೆ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ನಿಗಧಿತ ಅವಧಿಯೊಳಗೆ ಸಲ್ಲಿಸಿರುವ ದಾಖಲೆಗಳು)

13. ಪ್ರಾಥಮಿಕ ಶಿಕ್ಷಕರು/ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರು ಇರುವ ಸಂಬಂಧಿಸಿದ ಪುಟದ ದೃಢೀಕೃತ ಪ್ರತಿ.

Scanned with AnyScanner

## ಅನುಬಂಧ-2

ಮಾನ್ಯ ಉಪನಿರ್ದೇಶಕರು ಶಾ.ಶಿ.ಇ ಯಾದಗಿರಿ ರವರ ಕಾರ್ಯಾಲಯದಿಂದ ದಿನಾಂಕ 01-01-2025ರಲ್ಲಿದ್ದಂತೆ ಪ್ರಕಟಣೆ ಮಾಡಿರುವ ತರಬೇತಿ ಹೊಂದಿದ (ಬಿ.ಎ/ ಬಿ.ಎಸ್.ಸಿ , ಬಿ.ಇಡಿ /ಬಿ.ಪಿ.ಇಡಿ) ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು (ಪಿ.ಎಸ್.ಟಿ) ಹಾಗೂ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಜಿ.ಪಿ.ಟಿ) ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಜೇಷ್ಠತಾ ಪಟ್ಟಿಯಲ್ಲಿ ಇರುವ ದೋಷಗಳನ್ನು ಸರಿಪಡಿಸಲು ಆಕ್ಷೇಪಣೆ ಸಲ್ಲಿಸುವ ನಮೂನೆ

| SL | KGID NO | NAME OF TEACHER | NAME OF THE SCHOOL | TALUKA NAME | Designation | GENDER | CASTE (SC,ST, GM) | Selection category | Ph | DATE OF BIRTH | DATE OF ENTRY INTO SERVICE | MODE OF APPOINTMENT | DATE OF ENTRY INTO YADGIR DISTRICT | MERIT | MED.OF INSTRUCTION | SSLC MEDIUM | BA/BSC EXAM PASS YEAR | SUB-1 | SUB-2 | SUB-3 | B.ED PASS ELIGIBILITY YEAR | METHOD-1 | METHOD-2 | PG | HOME TOWN | LC/ RPC | DOCUMENT ATTACHMENT |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಈಗಾಗಲೇ ನಮೂದಿಸಿದ ವಿವರ | | | | | | | | | | | | | | | | | | | | | | | | | | | |
| ಸರಿಪಡಿಸಬೇಕಾದ ವಿವರ | | | | | | | | | | | | | | | | | | | | | | | | | | | 1)<br>2)<br>3) |

ಈ ಮೇಲಿನ ಶಿಕ್ಷಕರ ಮಾಹಿತಿಯನ್ನು ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ದಾಖಲೆ ಪರಿಶೀಲಿಸಿ ಸರಿಯಿದೆಯೆಂದು ದೃಢೀಕರಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ರುಜು ಮತ್ತು ಮೊಹರು

ಸಂಬಂಧಿಸಿದ ಶಿಕ್ಷಕರು ರುಜು ಮತ್ತು ಮೊಬೈಲ್ ಸಂಖ್ಯೆ

Scanned with AnyScanner